ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ
ವಯಸ್ಸಾದಂತೆ ಗಂಡಸರ ತಲೆ ಬೋಳಾಗುತ್ತೆ. ಗಡ್ಡ ಮೀಸೆಗಳೇಕೆ ಬೋಳಾಗುವುದಿಲ್ಲ?



‘ಕಪೋಲ ಕಲ್ಪಿತ’ ವಸ್ತುಗಳು ನೈಜ ವಸ್ತುಗಳಿಗಿಂತ ದೀರ್ಘಕಾಲ ಕಾಡುತ್ತವೆ.

ರತ್ನಜ, ಮೈಸೂರು
ಇಲ್ಲೊಂದು ಕಡೆ ಪಾನಿಪುರಿ ಅಂಗಡಿಯ ಪಕ್ಕದಲ್ಲೇ ಸರ್ಕಾರಿ ಆಸ್ಪತ್ರೆ ಇದೆಯಲ್ಲ?
ಗುಡ್. ಪರಸ್ಪರ ಸಹಕಾರವೇ ಉತ್ತಮ ಸಮಾಜಕ್ಕೆ ಬುನಾದಿ.

ರಾಜೀವ್ ಮಾಗಲ್, ಸಕಲೇಶಪುರ
ಸಕಲ ಪ್ರಶ್ನೆಗಳಿಗೂ ಉತ್ತರಿಸುವ ತಮಗೆ ಪ್ರಶ್ನೆ ಎದುರಾದಾಗ ಏನು ಮಾಡುತ್ತೀರಾ?
ಪೂರ್ವಾಪರ ಯೋಚಿಸಿ ಉತ್ತರಕ್ಕೆ ತಲುಪುತ್ತೇನೆ.

ಕಾವ್ಯಶ್ರೀ ಪತ್ರಿಮಠ, ಶೋರಾಪುರ
ಸಮಯ–ಸಂದರ್ಭಗಳ ಅರಿವಿಲ್ಲದೆ ವಕ್ಕರಿಸುವವರು ಯಾರ್‍ಯಾರು?



ಸೊಳ್ಳೆ, ವೈರಸ್, ಜಾಹೀರಾತು, ಮತಭಿಕ್ಷುಕರು, ಹುಚ್ಚುನಾಯಿ...

ಕೆ.ವಿ. ಗೋವಿಂದಾಚಾರಿ, ಮೈಸೂರು
ಗತಿಸಿದ ಗಣ್ಯರ ಜಯಂತಿಯನ್ನು ಆಡಳಿತ, ವಿರೋಧಪಕ್ಷಗಳು ಒಟ್ಟಾಗಿ ಆಚರಿಸುವುದಿಲ್ಲವೇಕೆ?
ಅವರಿಗೆ ಗಣ್ಯರೆನಿಸಿದವರನ್ನು ಇವರು ವಿಲನ್ನಿನಂತೆಯೇ ಕಾಣಬೇಕೆಂಬುದು ವಿರೋಧನೀತಿ!

ಪಿ.ಎನ್. ಶ್ರೀವತ್ಸ, ಬೆಂಗಳೂರು
ಇಲ್ಲೊಬ್ಬರು ಮನೆಯಲ್ಲಿ ಪೂಜೆ ಮಾಡುವಾಗ ಜೋರಾಗಿ ಗಂಟೆ/ಜಾಗಟೆ ಬಾರಿಸುವುದೇಕೆ?
ಆ ಸಮಯದಲ್ಲಾದರೂ ಅನ್ಯರ ಮಾತುಗಳು ತಮ್ಮ ಕಿವಿಗೆ ಬೀಳದಿರಲೆಂದು.

ಸೂರ್ಯಪ್ರಕಾಶ್, ಚೆನ್ನಾಗನಹಳ್ಳಿ
ಯಾವುದು ಸುಲಭ? ಬೆಂಗಳೂರಿನ ಗುಂಡಿಗಳಿಗೆ ಮೆತ್ತಿರುವ ಟಾರಿನ ಹೆಂಟೆಗಳ ಎಣಿಕೆಯೋ, ಆಕಾಶದ ನಕ್ಷತ್ರಗಳದೋ?
ನಕ್ಷತ್ರಗಳದೇ. ಅದು ಪರ್ಮನೆಂಟ್ ನಂಬರ್, ಇದು ದಿನೇದಿನೇ ಹೆಚ್ಚಾಗುತ್ತಿರುತ್ತದೆ.

ಎನ್.ಕೆ. ಹೆಬ್ಬಾರ್, ಕೋಣೆ
ಕುಡುಕರಲ್ಲಿ ಎ, ಬಿ, ಸಿ ಕ್ಲಾಸ್ ಎಂಬ ವರ್ಗೀಕರಣವಿದೆಯೆ?
ಹೂಂ. ale (ಬಿಯರ್) ಕುಡಿಯುವವರು ಎ; ಬ್ರಾಂದಿಯವರು ಬಿ; ಕಂಟ್ರಿ (ಸಾರಾಯಿ) ಯವರು ಸಿ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಕುಟುಂಬದಲ್ಲಿ ತಾಪತ್ರಯ ಬರುವುದು ಯಾವುದರಿಂದ ಸರ್?
ತಾಪ, ಪ್ರತಾಪ, ಸಂತಾಪದ ಸನ್ನಿವೇಶಗಳಿಂದ.

ಭಾರತೀ ಗಂಗಾಧರ್, ಬೆಂಗಳೂರು
Body spa, Car spa, Dog spa ಬಂತು. ಮುಂದೆ?
ಮನುಷ್ಯರ, ಕತ್ತೆಗಳ ಹಲ್ಲುಜ್ಜುವ ಕೇಂದ್ರಗಳೂ ಬರುತ್ತವಂತೆ.

ಮೋಹನರಾಜು ಎಸ್.ಎ. ಶಂಕರಘಟ್ಟ
ಕೆಲಸವಿಲ್ಲದ ಗಂಡು ಕರೀ ಒನಕೆಯ ತುಂಡು ಎಂದರೆ ಏನರ್ಥ?
‘ತೌಡು ಕುಟ್ಟಲು’ ಕೂಡ ನಾಲಾಯಕ್ ಎಂದು.

ಫಾಲನೇತ್ರ ಸಜ್ಜನ, ಶಿರಸಿ
ಬಿಳಿಗೂದಲಿಗೆ ಕಪ್ಪುಬಣ್ಣ ಹಚ್ಚುವ ಮುದುಕನಿಗೂ, ಕರಿಗೂದಲಿಗೆ ಬಿಳಿಬಣ್ಣ ಹಚ್ಚುವ ಯುವಕನಿಗೂ ವ್ಯತ್ಯಾಸ?
ಮುದುಕ ತನ್ನ ಮನಸ್ಸಿನ ವಯಸ್ಸಿಗೆ ತಕ್ಕಂತಿದ್ದಾನೆ; ಯುವಕ ತನ್ನ ವಯಸ್ಸಿನವರ ಮನಸ್ಸಿಗೆ ತಕ್ಕಂತಿದ್ದಾನೆ.

ಎಸ್ಸೆನ್ ಮಹಾಬಲರಾವ್, ಎನ್ನಾರ್‌ಪುರ
ಕಲಿಯುವ ಜೊತೆ ಕದಿಯುವಿಕೆ?
ಒಳ್ಳೆಯ ಕಲಿಕೆಗೆ ಗುರುಗಳ ‘ಚಿತ್ ಚೋರ್’ ಆಗುವುದು ಅವಶ್ಯ.

## ಬಹುಮಾನಿತ ಪ್ರಶ್ನೆ

ಕಾಳಿಹುಂಡಿ ಶಿವಕುಮಾರ್, ಮೈಸೂರು
ಹಳ್ಳಿ ಹುಡುಗರಿಗೆ ಹೆಣ್ಣುಗಳೇ ಸಿಗುತ್ತಿಲ್ಲವಂತೆ?
ನಿಜ. ವರ್ಕ್ ಫ್ರಂ ಹೋಮ್‌ಗೆ ಒಗ್ಗಿದ ಹೆಣ್ಣಿಗೆ ಫೀಲ್ಡ್ ವರ್ಕ್ (ಕೃಷಿ) ಒಗ್ಗದು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಪಕ್ಷ ಕಟ್ಟಲು ಮುಖ್ಯವಾಗಿ ಏನಿರಬೇಕು?
ಇತರ ಪಕ್ಷಗಳೊಡನೆ ಭಿನ್ನಮತ.

ಪಿ.ಜೆ. ರಾಘವೇಂದ್ರ, ಮೈಸೂರು
ಇಲ್ಲೊಬ್ಬರು ತಮ್ಮ ಮನೆಗೆ ‘ನೀವು ಕೇಳಿದಿರಿ?’ ಅಂತ ಹೆಸರಿಟ್ಟಿದ್ದಾರಲ್ಲಾ?
ಅನರ್ಹ ಪ್ರಶ್ನೆಗಳ ಪತ್ರಗಳನ್ನು ಹೊತ್ತೊಯ್ದು ತೂಕಕ್ಕೆ ಹಾಕಿದ್ದರಿಂದ ಬಂದ ಹಣದಲ್ಲಿ ಕಟ್ಟಿದ್ದಂತೆ.

ವಿ. ಹೇಮಂತಕುಮಾರ್, ಬೆಂಗಳೂರು
ರೇಷ್ಮೆ ಸೀರೆಗೆ ಮಾರುಹೋಗದೇ ಇರುವಳೇ ನೀರೆ?



ಇಂದಿನವರೆಗೆ ಕೇವಲ ಕಿಂಡಿಗಳನ್ನು ಜೋಡಿಸಿ ಹೊಲಿದ ತುಂಡುಗಳೇ ಸಾಕಂತೆ.

ಅನಸೂಯ ಟಿ, ಕೇದಿಗೆಮನೆ
ಕೈದಿಗಳ ಮನಸ್ಸು ನಿಜವಾಗಿಯೂ ಪರಿವರ್ತನೆ ಆಗುತ್ತದೆಯೆ?
ಹೂಂ. ‘ಚಿಲ್ರೆ ಚೋರಿ, ದರೋಡೆಗಿಂತ ಪೊಲಿಟಿಕ್ಸೇ ಉತ್ತಮ’ ಎಂದು ಬದಲಾದ ಅನೇಕರಿದ್ದಾರೆ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ಇಂದು ಗಂಡಸರೂ ಜಡೆ ಬಿಡುವುದು ಏಕೆ?
ಋಷಿಗಳಂತೆ ಕಂಡರೆ ಮೇನಕೆಯರು ಬಂದಾರೆಂಬ ಆಸೆಯಂತೆ.

■ ರಾಮ್